# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 54 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಪಿ .ಹೆಚ್ . ಪೂಜಾರ್<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 11.08.2025 |
| ಉತ್ತರಿಸಬೇಕಾದ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮ ಅಡಿ 2017-18ರಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಸಿ.ಟಿ ಸ್ಕ್ಯಾನ್ ಮೆಷೀನ್ ಅಳವಡಿಸಲು ತೀರ್ಮಾನಿಸಿದ್ದು ಕ್ರಮಕೈಗೊಳ್ಳಲಾಗಿದೆಯೇ: | ಆದೇಶ ಸಂಖ್ಯೆ: ಆಕುಕ 27 ಎಫ್.ಪಿ. ಆರ್ 2018 , ದಿನಾಂಕ:17.03.2018ರನ್ವಯ Phase-I ರಲ್ಲಿ 15 ಜಿಲ್ಲಾ ಆಸ್ಪತ್ರೆಗಳಲ್ಲಿ CT ಹಾಗೂ 06 ಜಿಲ್ಲಾ ಆಸ್ಪತ್ರೆಗಳಲ್ಲಿ MRI ಸ್ಕ್ಯಾನ್ ಸೇವೆಗಳನ್ನು 2018-19 ರಿಂದ ಒದಗಿಸಲಾಗುತ್ತಿದೆ. ರಾಮನಗರ ಜಿಲ್ಲಾ ಆಸ್ಪತ್ರೆಯಲ್ಲಿ Tender ವೈಫಲ್ಯತೆಯ ಕಾರಣದಿಂದ PPP ಯೋಜನೆಯಡಿ CT ಸ್ಕ್ಯಾನ್ ಸೇವೆಯನ್ನು ಅನುಷ್ಠಾನಗೊಳಿಸಲಾಗಿರುವುದಿಲ್ಲ.<br><br>ಆದೇಶ ಸಂಖ್ಯೆ: ಆಕುಕ 160 ಎಫ್.ಪಿ.ಆರ್ 2022, ದಿನಾಂಕ:19.08.2023ರಲ್ಲಿ Phase-11 ರಲ್ಲಿ 15 ಜಿಲ್ಲಾ ಆಸ್ಪತ್ರೆಗಳಲ್ಲಿ MRI ಹಾಗೂ 05 CT ಸ್ಕ್ಯಾನ್ ಸೇವೆಗಳನ್ನು ಅನುಮೋದಿಸಲಾಗಿದೆ. ಆದರೆ PPP ಮಾದರಿಯಲ್ಲಿ ಒದಗಿಸಲಾಗುತ್ತಿರುವ ಸೇವೆಯಲ್ಲಿ ಹಲವಾರು ನ್ಯೂನತೆಗಳನ್ನು ಗಮನಿಸಲಾಗಿದೆ. ಆದ್ದರಿಂದ PPP ಮಾದರಿಯ ಬದಲಾಗಿ In-house model ಬಳಸಿ CT/MRI ಯಂತ್ರಗಳನ್ನು ಇಲಾಖೆಯಿಂದಲೇ ಖರೀದಿಸಿ, ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದೆ. ಇದರನ್ವಯ ಟೆಂಡರ್ ಮೂಲಕ 4 CT ಮತ್ತು 7 MRI ಯಂತ್ರಗಳ ಖರೀದಿಗೆ ಕ್ರಮಕೈಗೊಳ್ಳಲಾಗುವುದು. |
| ಆ) | ಬಾಗಲಕೋಟೆ ಜಿಲ್ಲೆಯಾದ್ಯಂತ ರಾಷ್ಟ್ರೀಯ ರಾಜ್ಯ ಹೆದ್ದಾರಿಗಳ ಜಾಲ ವಿಸ್ತಾರವಾಗಿದ್ದು ಮೇಲಿಂದ ಮೇಲೆ ನೂರಾರು ಅಪಘಾತಗಳು ಅಲ್ಲಲ್ಲಿ ಆಗುತ್ತಿರುವುದರಿಂದ ಬಾಲಕೋಟೆಯ ಸರ್ಕಾರಿ ಆಸ್ಪತ್ರೆಯಲ್ಲಿ ಎಂ.ಆರ್.ಐ. ಮೆಷೀನ್ ಇರದ ಕಾರಣ ಗಾಯಾಳುಗಳು ಎಂ.ಐ.ಆರ್ ಸ್ಕ್ಯಾನ್‌ಗಾಗಿ ವಿಜಯಪುರ ಜಿಲ್ಲಾ ಆಸ್ಪತ್ರೆಗೆ ತೆರಳಬೇಕಾಗಿದ್ದು, ಗಾಯಾಳುಗಳು ತೀವ್ರವಾದ ಸಮಸ್ಯೆಯನ್ನು ಎದರಿಸಬೇಕಾಗಿರುವ ಕಾರಣ ಬಾಗಲಕೋಟೆ ಜಿಲ್ಲಾ ಆಸ್ಪತ್ರೆಯಲ್ಲಿ ಎಂ.ಆರ್.ಐ ಸ್ಕ್ಯಾನ್ ಮೆಷೀನ್ ಅಳವಡಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆ ಮಾಹಿತಿ ಒದಗಿಸುವುದು? | • ಈಗಾಗಲೇ ಬಾಗಲಕೋಟೆ ಜಿಲ್ಲಾ ಆಸ್ಪತ್ರೆಯಲ್ಲಿ CT scan ಸೇವೆಗಳನ್ನು ಒದಗಿಸಲಾಗುತ್ತಿದೆ.<br><br>• ಬಾಗಲಕೋಟೆ ಜಿಲ್ಲಾ ಆಸ್ಪತ್ರೆಗೆ ರೂ.15.00 ಕೋಟಿ ವೆಚ್ಚದಲ್ಲಿ ನಿಯಮಾನುಸಾರ MRI ಯಂತ್ರವನ್ನು ಖರೀದಿಸಿ ಹಾಗೂ ಅಳವಡಿಸಿ ಸಾರ್ವಜನಿಕರಿಗೆ ಅತಿ ಶೀಘ್ರದಲ್ಲಿ ಸೇವೆಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. |

**ಸಂಖ್ಯೆ: ಆಕುಕ 56 ಎಸ್.ಟಿ.ಕ್ಯೂ 2025**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು